ಶ್ರೀ ಹೆಚ್.ಡಿ. ಬಸವರಾಜ್ : ಮಾನ್ಯ ಅಧ್ಯಕ್ಷರೆ, ವಿರಾಜಪೇಟೆಯಲ್ಲಿರುವ ಮಸೀದ್-ಇ-ಅಜಾಮ್ ಎಂಬ ಸಂಸ್ಥೆಯು ವಿರಾಜಪೇಟೆಯ ಸರ್ವೆ ನಂಬರ್ 731ರಲ್ಲಿ 260 ಏ12 ಅಡಿ ರಸ್ತೆಯನ್ನು ಮಾಡಿದ್ದು ಇದು ವಕ್ಫ್ ಮಂಡಳಿಯ ಗಮನಕ್ಕೆ ತರದೇ ಮಾಡಿರುವುದರಿಂದ ಇದರ ಬಗ್ಗೆ ಕ್ರಮ ಕೈಗೊಳ್ಳಲಾಗುತ್ತಿದೆಯೆಂದು ಉತ್ತರದಲ್ಲಿ ಹೇಳಿದ್ದಾರೆ. ಮಸೀದ್-ಇ-ಅಜಾಮ್ ಎಂಬ ಸಂಸ್ಥೆಯವರು ಈ ರಸ್ತೆಯನ್ನು ಮಾಡಿಲ್ಲ. ಒಂದು ವೇಳೆ ಮಾಡಿದ್ದರೆ ಯಾವ ಕಾರಣಕ್ಕಾಗಿ ಮಾಡಿದ್ದಾರೆ? ಅದರ ಉದ್ದೇಶವೇನು? ನನಗೆ ಗೊತ್ತಿರುವ ಮಟ್ಟಿಗೆ ಇದನ್ನು ಅಲ್ಲಿರುವ ರಾಜಕಾರಣಿಯೊಬ್ಬರು ಮಾಡಿರುವ ವ್ಯವಸ್ಥೆ. ಅವರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತಾರೆಂದು ಕೇಳುತ್ತಿದ್ದೇನೆ.

ಶ್ರೀಮತಿ ಲೀಲಾದೇವಿ ಆರ್ ಪ್ರಸಾದ್ : (ಕನ್ನಡ ಮತ್ತು ಸಂಸ್ಕೃತಿ ವಕ್ಫ್ ಸಚಿವರ ಪರವಾಗಿ) ಮಾನ್ಯ ಅಧ್ಯಕ್ಷರೆ, ವಿರಾಜಪೇಟೆಯಲ್ಲಿರುವ ಸರ್ವೆ ನಂಬರ್ 731ರಲ್ಲಿ ಮಸೀದ್-ಇ-ಅಜಾಮ್ ಇದ್ದು ಸದರಿ ಸರ್ವೆ ನಂಬರ್ 260 (12) ಅಡಿಗಳ ಜಾಗವನ್ನು ಶ್ರೀ ಹೆಚ್.ಎಸ್. ಮೊಹಿರುದ್ದೀನ್ ಜಮೀನಿಗೆ ಹೋಗಲು ಸಂಪರ್ಕ ರಸ್ತೆ ಮಾಡಿದ್ದು ಅದಕ್ಕೆ ಕರ್ನಾಟಕ ರಾಜ್ಯ ವಕ್ಫ್ ಮಂಡಳಿಯ ಪೂರ್ವಾನುಮತಿಯನ್ನು ಪಡೆದಿರುವುದಿಲ್ಲ. ಈ ರೀತಿ ಕರ್ನಾಟಕ ವಕ್ಫ್ ಮಂಡಳಿಯ ಪೂರ್ವಾನುಮತಿ ಪಡೆಯದೆ ಮಾಡಿರುವ ಮಾರಾಟ, ಗುತ್ತಿಗೆ, ಆಧಾರ ಅಥವಾ ಬದಲಿ ವ್ಯವಸ್ಥೆ ಸಿಂಧುವಲ್ಲವೆಂದು ಕಂಡುಬರುತ್ತದೆ. ವಕ್ಫ್ ಮಂಡಳಿಯ ಕಾಯ್ದೆ 1995ರ ವಿಧಿ 56ರಂತೆ ಮಂಡಳಿಯಲ್ಲಿ ಅನುಮೋದನೆಗೊಂಡಿರುವುದಿಲ್ಲ. ಇಲ್ಲಿ ಕಾನೂನು ಉಲ್ಲಂಘನೆ ಮಾಡಿದ್ದಾರೆಂದು ಸ್ಪಷ್ಟವಾಗಿ ಗೊತ್ತಾಗುತ್ತಿದೆ. ಸಂಸ್ಥೆಯವರು ಇದನ್ನು ಒಪ್ಪಿದ್ದಾರೆ. ಕರ್ನಾಟಕ ರಾಜ್ಯ ವಕ್ಫ್ ಮಂಡಳಿ ಸಂಸ್ಥೆ ಕಾರ್ಯಕಾರಿ ಸಮಿತಿಯ ವಿರುದ್ಧ ವಕ್ಫ್ ಮಂಡಳಿಯ ಕಾಯ್ದೆ 1995ರ ರೀತ್ಯ ಕ್ರಮ ಕೈಗೊಳ್ಳಬೇಕಾಗಿದೆ.

ಶ್ರೀ ಹೆಚ್.ಡಿ.ಬಸವರಾಜ್ : ಮಾನ್ಯ ಅಧ್ಯಕ್ಷರೆ, ಒಬ್ಬ ವ್ಯಕ್ತಿ ತನ್ನ ಸ್ವಂತ ಉಪಯೋಗಕ್ಕಾಗಿ ವಕ್ಫ್ ಸಂಸ್ಥೆಗೆ ಸೇರಿದ ಆಸ್ತಿಯಲ್ಲಿ ರಸ್ತೆ ಮಾಡಿದ್ದಾರೆ. ಆ ವ್ಯಕ್ತಿಯ ವಿರುದ್ಧ ತಾವೇನು ಕ್ರಮ ತೆಗೆದುಕೊಳ್ಳುತ್ತೀರಿ? ಈಗ ಮಾಡಿರುವ ರಸ್ತೆಯನ್ನು ಏನು ಮಾಡುತ್ತೀರಾ ?

ಶ್ರೀಮತಿ ಲೀಲಾದೇವಿ ಆರ್.ಪ್ರಸಾದ್ : ವರದಿಯನ್ನು ತರಿಸಿ ಕಾನೂನಿನ ರೀತಿ ಕ್ರಮ ತೆಗೆದುಕೊಳ್ಳುತ್ತೇವೆ.

ಸೋಮವಾರಪೇಟೆ ತಾಲ್ಲೂಕಿನ ಚಿಕ್ಲಿಹೊಳೆ ಅಣೆಕಟ್ಟಿನ ಕಾಮಗಾರಿ

137 (727) ಶ್ರೀ ಡಿ.ಎಸ್.ಮಾದಪ್ಪ (ಮಡಿಕೇರಿ) : ಮಾನ್ಯ ಬೃಹತ್ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

1) ಸೋಮವಾರಪೇಟೆ ತಾಲ್ಲೂಕಿನ ಚಿಕ್ಲಿಹೊಳೆ ಅಣೆಕಟ್ಟಿನ ಕಾಮಗಾರಿ ಪ್ರಗತಿಕಾರ್ಯ ಯಾವ ಹಂತಕ್ಕೆ ತಲುಪಿದೆ.ಈ ಕಾಮಗಾರಿಗೆ ನಿಯೋಜಿಸಲಾದ ಅಂದಾಜು ಮೊತ್ತವೆಷ್ಟು ?

2) ಈ ಕಾಮಗಾರಿಯನ್ನು ಎಂದಿನಿಂದ ಆರಂಭಿಸಲಾಗಿದೆ ಹಾಗೂ ಇದನ್ನುಪೂರ್ಣಗೊಳಿಸಲು ಬೇಕಾಗುವ ಕಾಲಾವಧಿ ಎಷ್ಟು ?

3) ಈ ಕಾಮಗಾರಿಯಿಂದ ಪ್ರಯೋಜನವಾಗುವ ಜಮೀನಿನ ವಿಸ್ತೀರ್ಣವೆಷ್ಟು ?

ಶ್ರೀ ಕೆ.ಎನ್.ನಾಗೇಗೌಡ (ಬೃಹತ್ ನೀರಾವರಿ ಸಚಿವರು) :

1) ಚಿಕ್ಲಿಹೊಳೆ ಜಲಾಶಯ ಯೋಜನೆಯಡಿಯಲ್ಲಿ ಜಲಾಶಯದ ಕಾಮಗಾರಿಗಳು ಪೂರ್ಣಗೊಂಡಿರುತ್ತದೆ ಹಾಗೂ ತಲುಪಿದೆ : ನಾಲೆಯ ಕಾಮಗಾರಿಗಳಲ್ಲಿ 7ನೇ ಕಿ.ಮೀ. ಹಾಗೂ 8ನೇ ಕಿ.ಮೀ.ನಲ್ಲಿ ಸುಮಾರು 300ಮೀ.ಭೂ ಸ್ವಾಧೀನತೆಯ ತೊಂದರೆಯಿಂದ ಬಾಕಿ ಇದ್ದುಉಳಿದಂತೆ ನಾಲೆಯ ಪೂರ್ಣ ಉದ್ದಕ್ಕೆ (29ಕಿ.ಮೀ.) ಎಲ್ಲಾ ಕಾಮಗಾರಿಗಳುಮುಗಿದಿರುತ್ತದೆ. ಮೇಲಿನ ಭೂ ಸ್ವಾಧೀನತೆಯ ಬಹಳ ವರ್ಷಗಳಿಂದ ನೆನೆಗುದಿಗೆ ಬಿದ್ದಿರುವುದರಿಂದ ನಾಲೆಯ ಪೂರ್ಣ ಉದ್ದಕ್ಕೆ ನೀರು ಹರಿಸಲು ಸಾಧ್ಯವಾಗಿರುವುದಿಲ್ಲ. ಭೂ ಸ್ವಾಧೀನಪಡಿಸಿಕೊಳ್ಳಲು ಭೂಸ್ವಾಧೀನಾಧಿಕಾರಿಗಳು, ಹುಣಸೂರು ಹಾಗೂ ಜಿಲ್ಲಾಧಿಕಾರಿಗಳು,ಕೊಡಗು ಜಿಲ್ಲೆರವರೊಡನೆ ಬಹಳಷ್ಟು ಪತ್ರ ವ್ಯವಹರಿಸಲಾಗಿದೆ ಹಾಗೂ ತುರ್ತಾಗಿ ಭೂಸ್ವಾಧೀನಪಡಿಸಿಕೊಡಲು ಕೋರಲಾಗಿದೆ.ಚಿಕ್ಲಿಹೊಳೆ ಜಲಾಶಯ ಯೋಜನೆಯ ಪರಿಷ್ಕೃತ ಅಂದಾಜು ಮೊತ್ತ ರೂ. 17.35 ಕೋಟಿಗಳು.

The works of Dam proper under Chicklihole Project is completed. The canal works for 29 Km. is completed in all respect exceptfor 300m. length in 7th & 8th Km. due toland acquisition problem.

The land acquisition problem is pending since a long period. Heance water cannot be supplied for the entire reach of canal. Regarding land acquisition problem correspondance in detail are being made with the Deputy Commissioner, Madikeri District,and the S.L.A.O., Hunsur. Action is being taken to expedite the acquisition process.

The revised estimate cost of Chicklihole project is Rs.17.35 crores.

2) ಚಿಕ್ಲಿಹೊಳೆ ಜಲಾಶಯ ಯೋಜನೆಯನ್ನು 1979ರಲ್ಲಿ ಪ್ರಾರಂಭಿಸಲಾಗಿದೆ.ಭೂಸ್ವಾಧಿನವಾದ ಕೂಡಲೇ ಕಾಮಗಾರಿಯನ್ನು ಕೈಗೆತ್ತಿಕೊಂಡು ಪೂರ್ಣಗೊಳಿಸಲಾಗುವುದು.

The project work was started in the year1979. the project will be completed after taking pessession of theland.

ಈ ಯೋಜನೆಯಿಂದ ಒಟ್ಟು 865 ಹೆ. ಜಮೀನಿಗೆ ನೀರೊದಗಿಸಲು ಯೋಜಿಸಲಾಗಿದೆ.ಪ್ರಸಕ್ತ 436 ಹೆ. ಜಮೀನಿಗೆ ನೀರು ಒದಗಿಸಲಾಗುತ್ತದೆ.

An Irrigation potential of 865 Ha. are envisaged under this project. The present potential achieved is 436 Ha.

ಶ್ರೀ ಡಿ.ಎಸ್.ಮಾದಪ್ಪ : ಮಾನ್ಯ ಅಧ್ಯಕ್ಷರೆ, ಈ ಪ್ರಶ್ನೆಯನ್ನು ಕಳೆದ ವರ್ಷ ಇದೇ ಸದನದಲ್ಲಿ ಕೇಳಿದ್ದೆ. ಸುಮಾರು ಇಪ್ಪತ್ತು ವರ್ಷಗಳ ಹಿಂದೆ ಪ್ರಾರಂಭವಾದ ಈ ಅಣೆಕಟ್ಟೆಯ ಯೋಜನೆ ಇನ್ನೂ ಸಹ ಪೂರ್ಣವಾಗಿಲ್ಲ. ಮೂರು ಕೋಟಿಯಿಂದ ಪ್ರಾರಂಭವಾದ ಯೋಜನೆ ಇಂದು ಸುಮಾರು 17.35

ಕೋಟಿ ರೂಪಾಯಿಗಳಿಗೆ ಮುಟ್ಟಿದೆ. ಈ ನಾಲೆಯ ಉದ್ದ 29 ಕಿ.ಮಿ. ಏಳು ಮತ್ತು ಎಂಟನೆ ಕಿಲೋಮೀಟರ್‌ನ ನಡುವಿನ 300 ಮೀಟರ್ ಜಮೀನನ್ನು ಇನ್ನು ಸಹ ಕಳೆದ ಇಪ್ಪತ್ತು ವರ್ಷಗಳಿಂದ ಸ್ವಾಧೀನಪಡಿಸಿಕೊಳ್ಳಲು ಸಾಧ್ಯವಾಗಿಲ್ಲವೆಂದು ಉತ್ತರದಲ್ಲಿ ಹೇಳಿದ್ದಾರೆ. ಆಣೆಕಟ್ಟೆ ಪೂರ್ತಿಯಾಗಿದೆ ಯೆಂದು ಹೇಳುತ್ತಾರೆ. ಆದರೆ ಅದು ನಿಯೋಜಿತವಾಗಿ ಎಷ್ಟು ಎತ್ತರ ಇರಬೇಕಾಗಿತ್ತೋ ಅಷ್ಟು ಇಲ್ಲ, ಅದು ಮೂರು ಅಡಿ ಕಡಿಮೆ ಇದೆ. ಇದರ ಬಗ್ಗೆ ಬಹಳಷ್ಟು ಹಿತಾಸಕ್ತಿಗಳ ಕೈವಾಡವಿದೆ. ಇದರ ಬಗ್ಗೆ ಸರ್ಕಾರವೇನು ಕ್ರಮ ತೆಗೆದುಕೊಳ್ಳುತ್ತಿಲ್ಲವೆಂದು ಬಹಳ ನೊಂದು ಹೇಳಬೇಕಾಗುತ್ತದೆ. ಇಪ್ಪತ್ತು ವರ್ಷಗಳ ಹಿಂದೆ ಮೊದಲು ಏನು ಆಣೆಕಟ್ಟೆ ಇತ್ತು ಅದು ನೂರು ಎಕರೆ ಜಮೀನಿಗೆ ನೀರನ್ನು ಕೊಡುತ್ತಿತ್ತು. ಆದರೆ ಇವತ್ತು ಇಷ್ಟೊಂದು ಹಣವನ್ನು ಖರ್ಚು ಮಾಡಿ ಅಷ್ಟೇ ಎಕರೆ ನೀರಾವರಿ ಮಾಡುತ್ತಿದ್ದೀರಿ. ಬಲದಂಡೆ ಕಾಲುವೆ ಇಲ್ಲ, ಎಡದಂಡೆಯಲ್ಲಿ ಏಳು ಮತ್ತು ಎಂಟನೆ ಕಿಲೋಮೀಟರ್ ಮಧ್ಯ ಇರುವ ಮುನ್ನೂರು ಮೀಟರ್ ಜಾಗವನ್ನು ಇಪ್ಪತ್ತು ವರ್ಷಗಳಾದರು ಸ್ವಾಧೀನಪಡಿಸಿಕೊಳ್ಳಲು ಸಾಧ್ಯವಾಗಿಲ್ಲ. ನಾಲೆಗಾಗಿ ಏನು ಜಾಗವನ್ನು ಸ್ವಾಧೀನ ಮಾಡಿಕೊಂಡಿದ್ದರೋ ಅಲ್ಲಿ ರಸ್ತೆಗಳನ್ನು ಮಾಡಿ ನಿವೇಶಗಳನ್ನು ಹಂಚುತ್ತಿದ್ದಾರೆ. ಆದ್ದರಿಂದ ಈ ಯೋಜನೆಯ ಬಗ್ಗೆ ಪರಿಶೀಲನೆ ಮಾಡಲು ಸದನದ ಸಮಿತಿ ಮಾಡಬೇಕಾಗುತ್ತದೆ. ಈ ರೀತಿ ವರ್ಷ ವರ್ಷ ಮುಂದಕ್ಕೆ ಹೋದರೆ ಈ ಯೋಜನೆ 30 ಕೋಟಿ ತಲುಪಿದರೆ ಆಶ್ಚರ್ಯವೇನಲ್ಲ. ಆದ್ದರಿಂದ ಇದರ ಬಗ್ಗೆ ಸದನದ ಸಮಿತಿಯು ಸಮಗ್ರ ತನಿಖೆಯನ್ನು ಮಾಡಬೇಕಾಗಿ ವಿನಂತಿಸುತ್ತೇನೆ.

ಶ್ರೀ ಎಂ.ಪಿ.ಅಪ್ಪಚ್ಚು ರಂಜನ್: ಕಳೆದ ಸಾರಿ ತಮ್ಮನ್ನು ಭೇಟಿ ಮಾಡಿದಾಗ ಇನ್ನು ಮೂರು ತಿಂಗಳಿನಲ್ಲಿ ನೀರನ್ನು ಕೊಡುವುದಾಗಿ ಹೇಳಿದ್ದಿರಿ. ಆದರೆ ಇವತ್ತು 436 ಎಕರೆಗೆ ಮಾತ್ರ ನೀರನ್ನು ಕೊಡಲು ಸಾಧ್ಯವಾಗಿದೆ. ಆದಷ್ಟು ಬೇಗನೆ ಆ ಮುನ್ನೂರು ಮೀಟರ್‌ನ ನಾಲೆ ಮಾಡಿ ನೀರನ್ನು ಕೊಡುವ ವ್ಯವಸ್ಥೆಯಾಗಬೇಕೆಂದು ವಿನಂತಿಸಿಕೊಳ್ಳುತ್ತೇನೆ.

ಶ್ರೀ ಕೆ.ಎನ್.ನಾಗೇಗೌಡ : ಮಾನ್ಯ ಅಧ್ಯಕ್ಷರೆ, ಈ ಯೋಜನೆಯ ಬಗ್ಗೆ ಮಾನ್ಯ ಸದಸ್ಯರುಗಳಿ ಬ್ಬರಿಗೂ ಚೆನ್ನಾಗಿ ಗೊತ್ತಿದೆ. ಪ್ರಾಜೆಕ್ಟ್ ಎಲ್ಲಾ ಪೂರ್ಣವಾಗಿದೆ. ಸುಮಾರು 16.79 ಕೋಟಿ ರೂಪಾಯಿ ಹಣವನ್ನು ಖರ್ಚು ಮಾಡಿದ್ದೇವೆ. 865 ಹೆಕ್ಟೇರ್ ಜಮೀನಿಗೆ ನೀರನ್ನು ಕೊಡಬೇಕಾಗಿತ್ತು, ಅದರಲ್ಲಿ ಈಗಾಗಲೇ 436 ಹೆಕ್ಟೇರ್‌ಗೆ ನೀರನ್ನು ಕೊಟ್ಟಿದ್ದೇವೆ. ಡ್ಯಾಂ ಮತ್ತು ಕೆನಾಲ್‌ಗಳು ಪೂರ್ಣವಾಗಿವೆ. ಮುನ್ನೂರು ಮೀಟರ್ ಜಾಗವನ್ನು ಸ್ವಾಧೀನಪಡಿಸಿಕೊಳ್ಳಬೇಕಾಗಿದೆ. ಇದರ ಬಗ್ಗೆ ಡೆಪ್ಯೂಟಿ ಕಮೀಷನರ್, ಸಂಬಂಧಪಟ್ಟ ಭೂ ಸ್ವಾಧೀನಾಧಿಕಾರಿಗಳು, ಕೊಡಗಿನ ಜಿಲ್ಲಾಧಿಕಾರಿಗಳು, ಎಲ್ಲರು ಹೋಗಿ ಪರೆಸ್ಯೂ ಮಾಡುತ್ತಿದ್ದಾರೆ. ಆದರೆ ಅವರು ಜಾಗವನ್ನು ಬಿಟ್ಟು ಕೊಟ್ಟಿಲ್ಲ. ಅವರು ಭೂಸ್ವಾಧೀನದ ಕಾಸ್ಟ್ ಎಷ್ಟು ಎಂದು ಕೇಳಿದ್ದಾರೆ, ನಾಲೆಯನ್ನು ಸಂಪೂರ್ಣ ಮಾಡಿ ಎಂದಿದ್ದಾರೆ, ಮತ್ತು ಡ್ಯಾಂನ ಎತ್ತರದ ಬಗ್ಗೆ ಪರಿಶೀಲನೆ ಮಾಡಿಸಿದೆಯೆಂದು ಹೇಳಿದ್ದಾರೆ. ಇದರ ಬಗ್ಗೆ ನಾನು ತಾಂತ್ರಿಕ ಸಮಿತಿಯವರನ್ನು ಕಳಿಸಿ ಪರಿಶೀಲನೆ ಮಾಡಿಸುತ್ತೇನೆ. ಮತ್ತು ಅದರ ಬಗ್ಗೆ ಸಂಪೂರ್ಣವಾದ ಮಾಹಿತಿಯನ್ನು ತರಿಸಿ ಈ ಯೋಜನೆಯನ್ನು ಪೂರ್ಣ ಮಾಡಲು ಪ್ರಯತ್ನ ಮಾಡುತ್ತೇನೆ.

ಶ್ರೀ ಡಿ.ಎಸ್. ಮಾದಪ್ಪ : ಮಾನ್ಯ ಸಚಿವರು ಕಳೆದ ವರ್ಷ ಇದೇ ಉತ್ತರವನ್ನು ಕೊಟ್ಟಿದ್ದರು. ಆಣೆಕಟ್ಟೆ ಪೂರ್ಣವಾಗಿದೆಯೆಂದು ತಾವು ಹೇಳಿದ್ದೀರಿ, ಆದರೆ ಅದರ ಎತ್ತರ ನಿಗಧಿಯಾಗಿದ್ದಕ್ಕಿಂತ

ಮೂರು ಅಡಿ ಕಡಿಮೆಯಾಗಿದೆ. ಮತ್ತು ಯಾವ ಜಮೀನು ಮುಳುಗಡೆಯಾಗಿಲ್ಲ ಅವರು ಪರಿಹಾರವನ್ನು ಪಡೆದುಕೊಂಡಿದ್ದಾರೆ. ಒಂದೇ ಕುಟುಂಬದವರಿಗೆ ಸುಮಾರು ಒಂದು ಕೋಟಿಯಷ್ಟು ಪರಿಹಾರವನ್ನು ಕೊಟ್ಟಿದ್ದಾರೆ. ಯಾರಿಗೆ ನಿಜವಾಗಿ ಪರಿಹಾರ ಲಭ್ಯವಾಗಬೇಕಾಗಿತ್ತೋ ಅವರಿಗೆ ಸಿಕ್ಕಿಲ್ಲ. ಆದ್ದರಿಂದ ಇದರ ಬಗ್ಗೆ ಸಮಗ್ರ ತನಿಖೆಯಾಗಬೇಕು. ಸದನದ ಸಮಿತಿ ರಚನೆ ಮಾಡಬೇಕು.

ಶ್ರೀ ಕೆ.ಎನ್.ನಾಗೇಗೌಡ : ಅವರು ಪರಿಹಾರ ವಿತರಣೆಯಾಗಿರುವ ಬಗ್ಗೆ ಎತ್ತಿದ್ದಾರೆ, ನಿಜವಾಗಿ ಯಾರಿಗೆ ಪರಿಹಾರ ದೊರೆಯಬೇಕಾಗಿತ್ತು ಎಂಬ ಬಗ್ಗೆ ಮತ್ತೊಂದು ಸಲ ಪರಿಶೀಲನೆ ಮಾಡಲು ಡೆಪ್ಯೂಟಿ ಕಮೀಷನರ್ ಮತ್ತು ಭೂ ಸ್ವಾಧೀನಾಧಿಕಾರಿಗಳಿಗೆ ಆದೇಶ ಕೊಡುತ್ತೇನೆ.

ಹುಬ್ಬಳಿ-ಧಾರವಾಡ ಮಹಾನಗರದಲ್ಲಿ ವಿದ್ಯುತ್ ಕಳವು

138 (781) ಶ್ರೀ ಅಶೋಕ್ ಶಂಕರ್ ಕಾಟ್ವೆ (ಹುಬ್ಬಳಿನಗರ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಹುಬ್ಬಳಿ-ಧಾರವಾಡ ಮಹಾನಗರದಲ್ಲಿ ವಿದ್ಯುತ್ ಕಳುವಾಗುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ವಿದ್ಯುತ್ ಕಳುವಿನಲ್ಲಿ ಅಧಿಕಾರಿಗಳು ಶಾಮೀಲಾಗಿದ್ದಾರೆಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಇ) ಇದನ್ನು ತಡೆಯಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು ? ಹಾಗೂ ಇದರಿಂದ ಆಗುತ್ತಿರುವ ವಾರ್ಷಿಕ ನಷ್ಟ ಪೆಷ್ಟು ?

ಶ್ರೀ ಶರಣ ಬಸಪ್ಪ ದರ್ಶನಾಪುರ (ಇಂಧನ ರಾಜ್ಯ ಸಚಿವರು) :

ಅ) ಹೌದು.

ಆ) ಕೆಲವು ಪ್ರಕರಣಗಳಲ್ಲಿ ಮಂಡಳಿಯ ಅಧಿಕಾರಿಗಳು ನೌಕರರು ಶಾಮೀಲಾಗಿರುವುದು ಗಮನಕ್ಕೆ ಬಂದಿದೆ.

ಇ) ವಿದ್ಯುತ್‌ಕಳ್ಳತನ ಮತ್ತು ದುರುಪಯೋಗಗಳನ್ನು ತಡೆಗಟ್ಟಲು ಮುಖ್ಯವಾಗಿ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ.

1) ಜಾಗೃತದಳ ಮತ್ತು ಟೆಕ್ನಿಕಲ್ ಆಡಿಟ್‌ಸೆಲ್‌ಗಳನ್ನು ಬಲಪಡಿಸಲಾಗಿದ್ದು, ಇವುಗಳಿಗೆ ಸಾಕಷ್ಟು ವಾಹನಗಳ ಸೌಲಭ್ಯವನ್ನು ಕಲ್ಪಿಸಲಾಗಿದೆ. ಇವು ಅನಿರೀಕ್ಷಿತ ತನಿಖೆಗಳನ್ನು ತೀವ್ರಗೊಳಿಸಿವೆ.

2) ಎಲ್ಲಾ ಹೆಚ್.ಟಿ.ಕೈಗಾರಿಕೆಗಳ ಸ್ಥಾವರಗಳಿಗೆ ಟ್ಯಾಂಪರ್‌ಪ್ರೂಫ್ ಆದ ಎಲೆಕ್ಟ್ರಾನಿಕ್ ಮೀಟರ್‌ಗಳನ್ನು ಅಳವಡಿಸಲಾಗಿದೆ. ಎಲ್.ಟಿ.ಕೈಗಾರಿಕೆಗಳ ಸ್ಥಾವರಗಳಿಗೆ ಎಲೆಕ್ಟ್ರಾನಿಕ್ ಮೀಟರ್‌ಗಳನ್ನು ಅಳವಡಿಸುವ ಕಾರ್ಯವೂ ಪ್ರಗತಿಯಲ್ಲಿದೆ.

3) 40 ಹೆಚ್.ಪಿ.ಗೂ ಮೇಲ್ಪಟ್ಟ ಕೈಗಾರಿಕೆ ಸ್ಥಾವರಗಳಿಗೆ ಟ್ಯಾಂಪರ್ ಪ್ರೂಫ್‌ನ ಬಾಕ್ಸ್‌ಗಳನ್ನು ಅಳವಡಿಸುವ ಕಾರ್ಯವು ಪ್ರಗತಿಯಲ್ಲಿದೆ.